ಅಸಲು ದಾವಾ ನಂ. 17/2021 ಪಿಡಬ್ಲೂ : 1

ದಿನಾಂಕಃ 16-01-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 12 ನೇ ಪ್ರತಿವಾದಿಯರ ಪರವಾಗಿಃ ಶ್ರೀ ಡಿ ಎಸ್ ಬಿ ವಕೀಲರಿಂದಃ**

23. ಮೂಲ ದಾವೆ ನಂ. 139/2015 ರಲ್ಲಿ ನೋಂದಾಯಿತ ಅಂಚೆ ಮೂಲಕ ನನಗೆ ಕಳುಹಿಸಿದ ಸಮನ್ಸನ್ನು ನಾನು ಸ್ವತಃ ಪಡೆದುಕೊಂಡಿದ್ದರೂ ಸಹ ಆ ವಿಷಯ ಗೊತ್ತಿಲ್ಲ ಎಂದು ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಗಣೇಶ ಮಹಾಬಲೇಶ್ವರ ಪೂರ್ಣಮಠ ಎಂಬುವವರು ಮೂರನೇ ವಾದಿಯ ಮೈದುನ ಎಂದರೆ ಸರಿ . ಮೇಲೆ ಹೇಳಿದ ಮೂಲ ದಾವೆ ನಂ. 139/2015 ರಲ್ಲಿ 3 ನೇ ವಾದಿಗೆ ಕಳುಹಿಸಿದ ಸಮನ್ಸ ಮೇಲೆ ಹೇಳಿದ ಅವರ ಮೈದುನ ಸ್ವೀಕರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಮೇಲೆ ಹೇಳಿದ ದಾವೆಯಲ್ಲಿ 2 ನೇ ವಾದಿಗೂ ಸಹ ನೋಂದಾಯಿತ ಅಂಚೆಯ ಮೂಲಕ ಸಮನ್ಸ ಜಾರಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ . 1 ಮತ್ತು 12 ನೇ ಪ್ರತಿವಾದಿಯರು ಈ ದಾವೆಯಲ್ಲಿ ಸಲ್ಲಿಸಿರುವ ಉದಾಹರಣೆಯನ್ನು ನಾನು ಓದಿ ನೋಡಿರುತ್ತೇನೆ . ಆ ರೀತಿ 1 ಮತ್ತು 12 ನೇ ಪ್ರತಿವಾದಿಯರ ಉದಾಹರಣೆಯನ್ನು ನೋಡಿದ ನಂತರ ಮೇಲೆ ಹೇಳಿದ ಮೂಲ ದಾವೆ ನಂ . 139/2015 ರ ದಾಖಲೆಗಳನ್ನು ತೆಗೆದುಕೊಳ್ಳಲು ನಾನು ಯಾವುದೇ ಪ್ರಯತ್ನವನ್ನು ಮಾಡಿಲ್ಲ . ಈ ದಾವೆಯಲ್ಲಿ ನಾವು ಮಾರಾಟದ ಸಿಂಧುತ್ವವನ್ನು ಪ್ರಶ್ನೆ ಮಾಡಿದ್ದು , ಸದರಿ ಮಾರಾಟದ ವ್ಯವಹಾರದ ಬಗ್ಗೆ ಮೇಲೆ ಹೇಳಿದ ಮೂಲ ದಾವೆ ನಂ. 139/2015 ರಲ್ಲಿ ಇದ್ದ ವಿಷಯ ಆ ವೇಳೆಗೆ ನನಗೆ ಗೊತ್ತಿದ್ದರಿಂದ ಸದರಿ ದಾವೆಯಲ್ಲಿ ನನಗೆ ಸಮನ್ಸ ಜಾರಿಯಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸದರಿ ಮಾರಾಟದ ವ್ಯವಹಾರದ ಬಗ್ಗೆ ನಮಗೆ 2015 ರ ಪೂರ್ವದಲ್ಲೇ ಗೊತ್ತಿದ್ದರಿಂದ ಅದನ್ನು ಈಗ ಈ ದಾವೆಯಲ್ಲಿ ಪ್ರಶ್ನೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ .

ಮುಂದುವರೆದ ಪಾಟೀ ಸವಾಲನ್ನು, 2, 6 ಮತ್ತು 9 ನೇ ಪ್ರತಿವಾದಿಯರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅನುಮತಿ ನೀಡಲಾಯಿತು .

11 ನೇ ಪ್ರತಿವಾದಿಯರ ವಕೀಲರು ಕಾಲಾವಕಾಶ ಕೋರಿದ್ದು ಯಾವುದೇ ಸಕಾರಣ ಇರುವುದಿಲ್ಲ ಹಾಗೂ ಅವರ ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

8 ನೇ ಪ್ರತಿವಾದಿಯಾಗಲೀ ಅವರ ವಕೀಲರಾಗಲೀ ಹಾಜರಿರುವುದಿಲ್ಲ ಅವರನ್ನು ಯಾರೂ ಪ್ರತಿನಿಧಿಸಿರುವುದಿಲ್ಲ ಹಾಗೂ ಅವರ ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.